# ಸೈಲೆಂಟ್ ಕಿಲ್ಲರ್– ಅಂಬ್ಲಿಯೋಪಿಯ

ನಿಮಗಿದು ಗೊತ್ತೇ...?

ತಾಯಿಯ ಗರ್ಭದಿಂದ ಹೊರ ಬಂದ ಮಗು ಕೂಡಾ ಕೆಲವೇ ಹೊತ್ತಿನಲ್ಲಿ ನೋಡುತ್ತದೆ. ಬಾಲ್ಯಾವಸ್ಥೆಯಲ್ಲಿ ಮಗುವಿನ ದೃಷ್ಟಿಯ ಶಕ್ತಿ ಬೆಳೆಯುತ್ತಾ ಹೋಗುತ್ತದೆ. ಈ ವ್ಯವಸ್ಥೆ ಎಷ್ಟು ವೇಗವಾಗಿ ಬೆಳೆಯುತ್ತದೆಯೆಂದರೆ ಮಗು ಅತಿ ಬೇಗನೆ ತನ್ನ ಸುತ್ತಮುತ್ತಲು ಇರುವ ಮನೆಯವರು ಹಾಗೂ ವಸ್ತುಗಳನ್ನು ನೋಡಲು ಕಲಿಯುತ್ತದೆ. ಮಗುವಿನ ಮೊದಲ ಎರಡು ವರ್ಷಗಳಲ್ಲಿ ಪ್ರತಿಶತ 80ರಷ್ಟು ದೃಷ್ಟಿಯ ಶಕ್ತಿ ಬೆಳೆಯುತ್ತದೆ. ಮಗು ಎಂಟನೇ ವರ್ಷಕ್ಕೆ ಕಾಲಿಡುತ್ತಿರುವಂತೆಯೇ ಸಂಪೂರ್ಣವಾಗಿ ಈ ಶಕ್ತಿಯನ್ನು ಪಡೆದಿರುತ್ತದೆ. ಮಗು ಈ ಅವಧಿಯಲ್ಲಿ ಸರಿಯಾಗಿ ನೋಡುವುದಿಲ್ಲ ಎಂದಾದರೆ ಕಣ್ಣಿನ ದೋಷ ಇದೆಯೆಂದೇ ಅರ್ಥ. ಮಗು ದೃಷ್ಟಿ ಸಾಮರ್ಥ್ಯವನ್ನೂ ಆಗ ಕ್ರಮೇಣ ಕಳೆದುಕೊಂಡಿರುತ್ತದೆ.

ಅಂಬ್ಲಿಯೋಪಿಯ ಎಂದರೇನು?

ಮಗುವಿನ ಬಾಲ್ಯಾವಸ್ಥೆಯಲ್ಲಿ ದೃಷ್ಟಿ ಸಾಮರ್ಥ್ಯ ಸರಿಯಾಗಿ ಬೆಳೆಯದೇ ಇದ್ದು ಕಣ್ಣಿನ ದೋಷ ಬಂದರೆ ಅದನ್ನೇ ಅಂಬ್ಲಿಯೋಪಿಯ ಎನ್ನಬಹುದು. ಇದನ್ನು ಮಂದಗಣ್ಣು ಎಂದೂ ಕರೆಯುತ್ತಾರೆ. ನಮ್ಮ ನಿಮ್ಮ ಆಡು ಭಾಷೆಯಲ್ಲಿ ಮಾಲುಗಣ್ಣು, ಮೆಳ್ಳೆಗಣ್ಣು ಕೂಡಾ ಅಂತಾರೆ. ಮಗುವಿನ ಒಂದು ಕಣ್ಣು ಸರಿಯಾಗಿ ಇದ್ದು ಆ ಕಣ್ಣಿನಿಂದ ನೋಡಲು ಯಾವುದೇ ತೊಂದರೆಯಿಲ್ಲದೆ ಇನ್ನೊಂದು ಕಣ್ಣಿನಿಂದ ನೋಡಲು ಮಗು ಪರದಾಡುತ್ತಿದ್ದರೆ ಆಗ ಅಂಬ್ಲಿಯೋಪಿಯ ಬಂದಿದೆ ಎಂದರ್ಥ. ಸಾಮಾನ್ಯವಾಗಿ ಅಂಬ್ಲಿಯೋಪಿಯ ಬರುವುದು ಒಂದೇ ಕಣ್ಣಿಗೆ. ಎಲ್ಲಾ ಮಗುವಿಗೆ ಅಂಬ್ಲಿಯೋಪಿಯ ಬರುತ್ತದೆ ಎಂದೇನಿಲ್ಲ. ನೂರು ಮಕ್ಕಳ ಪೈಕಿ ಸುಮಾರು ಎರಡು ಅಥವಾ ಮೂರು ಮಕ್ಕಳಿಗೆ ಅಂಬ್ಲಿಯೋಪಿಯ ಇರಬಹುದು. ಬಾಲ್ಯಾವಸ್ಥೆಯಲ್ಲೇ ಇದನ್ನು ಸರಿಪಡಿಸಬಹುದು. ಇದೇ ಸರಿಯಾದ ಮಾರ್ಗ ಕೂಡಾ. ತಮ್ಮ ಮಕ್ಕಳನ್ನು ಈ ಸಮಸ್ಯೆಯಿಂದ ರಕ್ಷಿಸಬೇಕಾದರೆ ಪಾಲಕರು ತಮ್ಮ ಮಕ್ಕಳ ಕಣ್ಣುಗಳನ್ನು ಅಂದರೆ ಮಕ್ಕಳ ದೃಷ್ಟಿ ಸಾಮರ್ಥ್ಯವನ್ನು ಕಾಲಕಾಲಕ್ಕೆ ಗಮನಿಸುತ್ತಿರಬೇಕು. ಅಮ್ಮಾ ಕಾಣಿಸುತ್ತಿಲ್ಲ ಎಂದು ಯಾವತ್ತಾದರೂ ಮಗು ಹೇಳಿದರೆ ಆ ಮಾತನ್ನು ನಿರ್ಲಕ್ಷ್ಯ ಮಾಡಲೇಬಾರದು. ತಕ್ಷಣವೇ ತಜ್ಞ ನೇತ್ರ ವೈದ್ಯರ ಬಳಿ ಹೋಗಬೇಕು.

ದೃಷ್ಟಿಯಲ್ಲಿ ತೊಡಕುಗಳು ಕಂಡು ಬಂದಾಗಲೇ ಅಂಬ್ಲಿಯೋಪಿಯ ಬಂದಿದೆ ಎಂದು ತಿಳಿಯಬಹುದು. ಕುಟುಂಬದ ಇನ್ನಾರಿಗೋ ಅಂಬ್ಲಿಯೋಪಿಯ ಇತ್ತೇ ಎಂಬುದನ್ನೂ ಈ ಸಂದರ್ಭ ವೈದ್ಯರು ಮಾಹಿತಿ ಪಡೆಯುತ್ತಾರೆ.

ಮಗುವಿಗೆ ಒಕ್ಕಣ್ಣು ಇದ್ದರೆ ಸಮಸ್ಯೆ ಬರುವುದು ಬಹು ಸುಲಭ. ಒಕ್ಕಣ್ಣು ಇದ್ದಾಗ ಮಗು ಯಾವುದಾದರೂ ಒಂದು ಕಣ್ಣಿನ ಸಹಾಯದಿಂದ ನೋಡಲು ಪ್ರಯತ್ನ ಪಡುತ್ತದೆ. ಏಕೆಂದರೆ, ಎರಡು ಕಣ್ಣುಗಳ ಪೈಕಿ ಯಾವುದಾದರೂ ಒಂದು ಕಣ್ಣು ಮಗುವಿಗೆ ನೋಡಲು ಸುಲಭ ಎಂದು ಭಾವಿಸುತ್ತದೆ. ಆದ್ದರಿಂದ ಆ ಕಣ್ಣನ್ನೇ ಬಳಸುತ್ತದೆ. ಅಕ್ಷಿಪಟಲದ ಮೇಲೆ ಕಿರಣಗಳು ಬಿದ್ದಾಗ ಅದನ್ನು ಸ್ಪಷ್ಟವಾಗಿ ತಿಳಿಯಲು ವಿಫಲವಾದಾಗ ಅಲ್ಲಿ ಏನೋ ಸಮಸ್ಯೆ ಇದೆ ಎಂದರ್ಥ. ಏಕೆಂದರೆ, ಅಕ್ಷಿಪಟಲದ ಪದರು ಪ್ರತಿಬಿಂಬವನ್ನು ಗ್ರಹಿಸಿ ಮೆದುಳಿಗೆ ಸಂದೇಶ ರವಾನಿಸುವುದು. ಇದನ್ನು ಕನ್ನಡಕ ಧರಿಸಿಯೂ ಸರಿಪಡಿಸಬಹುದು. ಕೆಲವು ಸಂದರ್ಭಗಳಲ್ಲಿ ಒಂದು ಕಣ್ಣು ಸಮೀಪದೃಷ್ಟಿ ಹೊಂದಿದ್ದು ಆ ಕಣ್ಣಿಗೆ ವಸ್ತು ನೋಡುವಾಗ ಕಾಲಕ್ರಮೇಣ ಮಂದವಾಗಿ ಕಾಣಿಸಿದರೆ ಅಂಬ್ಲಿಯೋಪಿಯ ಸಮಸ್ಯೆ ಬಂದಿರುತ್ತದೆ. ಎರಡೂ ಕಣ್ಣುಗಳು ಸರಿಯಾಗಿವೆ ಎಂದು ಕಂಡುಬಂದರೂ ಒಂದು ಕಣ್ಣಿಗೆ ಅಂಬ್ಲಿಯೋಪಿಯ ಬಂದಿರುವುದೇ ತಿಳಿಯದ ಪರಿಸ್ಥಿತಿ ಇರುತ್ತದೆ.

ಅಂಬ್ಲಿಯೋಪಿಯ ಪತ್ತೆ ಮಾಡೋದು ಸುಲಭವಲ್ಲ. ಮಗು ತನ್ನ ಕಣ್ಣಿಗೆ ಏನೋ ತೊಂದರೆ ಇದೆ. ಸರಿಯಾಗಿ ಕಾಣಿಸುತ್ತಿಲ್ಲ ಎಂದು ಹೇಳದೆ ಇದ್ದರೆ ಪಾಲಕರಿಗೆ ಸಮಸ್ಯೆ ಇರುವುದೇ ತಿಳಿಯದು. ಎರಡು ಕಣ್ಣುಗಳ ದೃಷ್ಟಿಯಲ್ಲಿ ಪ್ರತ್ಯೇಕವಾಗಿ ಸಮಸ್ಯೆ ಇದೆ ಎಂದು ವೈದ್ಯರು ತಿಳಿದಾಗ ಮಾತ್ರ ಅಂಬ್ಲಿಯೋಪಿಯ ಇದೆ ಎಂಬುದು ಅರಿವಿಗೆ ಬರುತ್ತದೆ. ಅಂಬ್ಲಿಯೋಪಿಯವನ್ನು ಪತ್ತೆ ಮಾಡಲು ವೈದ್ಯರು ಅನುಸರಿಸುವ ಕ್ರಮವೂ ಮುಖ್ಯವಾದುದು. ಮಗುವಿನ ಯಾವುದಾದರೂ ಒಂದು ಕಣ್ಣಿಗೆ ಬಟ್ಟೆಯಿಂದ ಮುಚ್ಚಿ ಇನ್ನೊಂದು ಕಣ್ಣಿಂದ ನೋಡಲು ಹೇಳುತ್ತಾರೆ. ಒಂದು ವೇಳೆ ಮುಚ್ಚಿದ ಕಣ್ಣು ಸರಿಯಾಗಿದ್ದು, ಇನ್ನೊಂದು ಕಣ್ಣಿಗೆ ಅಂಬ್ಲಿಯೋಪಿಯ ಬಂದಿದ್ದರೆ ಮಗು ನೋಡಲು ಪರದಾಡುತ್ತದೆ. ಸರಿಯಾಗಿರುವ ಕಣ್ಣಿನಿಂದಲೇ ನೋಡಲು ಪ್ರಯತ್ನಿಸುತ್ತದೆ. ಮುಚ್ಚಿದ ಬಟ್ಟೆಯನ್ನು ತೆಗೆಯಲು ಪ್ರಯತ್ನಿಸುತ್ತದೆ. ಅದೂ ಆಗದಿದ್ದರೆ ಅಳುತ್ತದೆ. ಮಗುವಿನ ಕಣ್ಣಿಗೆ ಅಂಬ್ಲಿಯೋಪಿ ಬಂದಿದೆ ಎಂಬುದು ವೈದ್ಯರಿಗೆ ಆಗ ಸುಲಭವಾಗಿ ತಿಳಿಯುತ್ತದೆ.

ಆದ್ದರಿಂದ, ಪಾಲಕರೇ ನಿಮಗಿದು ತಿಳಿದಿರಲಿ.

ನಿಮ್ಮ ಮಗುವಿಗೆ ಅಂಬ್ಲಿಯೋಪಿಯ ಬಂದಿದ್ದರೆ ಅದನ್ನು ಸರಿಪಡಿಸುವುದು ನಿಮ್ಮ ಜವಾಬ್ದಾರಿ. ಮಗುವಿಗೆ ದೃಷ್ಟಿ ದೋಷದ ಯಾವುದೇ ಸಮಸ್ಯೆ ಕಂಡು ಬಂದಾಕ್ಷಣ ತಜ್ಞವೈದ್ಯರ ಬಳಿಗೆ ಧಾವಿಸಿ ಹೋಗಿ.

ನಿಮ್ಮ ಮಗುವಿನ ಕಣ್ಣನ್ನು ಒಂದು ಬಾರಿಯೂ ಪರೀಕ್ಷೆ ಮಾಡಿಸಿಲ್ಲವೇ? ಹಾಗಿದ್ದರೆ ತಡಮಾಡಬೇಡಿ. ಒಂದು ಬಾರಿಯಾದರೂ ತಜ್ಞ ನೇತ್ರ ವೈದ್ಯರನ್ನು ಭೇಟಿ ಮಾಡಿ ಪರೀಕ್ಷೆ ಮಾಡಿಸಿ.

■ ಡಾ|ಅರುಣ್ ಸಂಪ್ರತಿ
ನೇತ್ರತಜ್ಞ, ನಾರಾಯಣ ನೇತ್ರಾಲಯ,
ವೆಸ್ಟ್ ಆಫ್ ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು,
ದೂರವಾಣಿ 080– 3325311.
arunsamprathi@yahoo.com